ಶ್ರೀ ಕೆ. ಸಿದ್ದಯ್ಯ.—ಈ ರೋಸ್ಟರ್ ಸಿಸ್ಟಂನ್ನು ಕಿತ್ತು ಹಾಕುವಾಗ ಲೀಗಲ್ ಒಪಿನಿಯನ್ ತೆಗೆದು ಕೊಂಡು ಕಿತ್ತು ಹಾಕಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಲೀಗಲ್ ಒಪಿನಿಯನ್ ತೆಗೆದುಕೊಂಡು ಕಿತ್ತು ಹಾಕಿದ್ದೇವೆ.

De'ay in execution of Irrigation works by land Army Corporation

151. SRI J. L. KABADE (Balloli). -Will the Chief Minister be pleased to state.

(*a*) whether it is a fact that all Minor Irrigation Works financed inder World Bank Aid have been entrusted to Land Army Corpo-uation; if so, when the order to this effect was issued;

(*b*) whether it has come to the notice of Government that there rs inordinate delay in execution of works taken over by the Land Army Corporation.

(*c*) whether it has come to the notice of Government that work of Jagjivani Tank is not progressing satisfactorily and the work is not being done as per the P.W.D. specification;

(*d*) whether it has come to the notice of Government that all these works, which cost over Rs. 25-00 lakhs each have to be done according to Major Irrigation Standards:

(*e*) whether it has come to the notice of Government, that Land Army Corporation has no technical expertise to carry out such complicated work of Dams and Barrages ?

SRI H. M. CHANNABASAPPA (Minister for Health). [On behalf of SRI D. DEVARAJ URS (Chief Minister)].—

(*a*) Yes.

(*b*) No.

(*c*) No.

(*d*) Yes.

(*e*) No.

ಶ್ರೀ ಜೆ. ಎಲ್. ಕಬಾಡೆ.—ನನ್ನ ಮೊದಲನೇ ಪ್ರಶ್ನೆಯಲ್ಲಿ, ವಿಶ್ವಬ್ಯಾಂಕಿನವರು ನೀಡಿದ ಧನ ಸಹಾಯದ ಮೇರೆಗಿನ ಎಲ್ಲ ಸಣ್ಣ ನೀರಾವರಿ ಕಾಮಗಾರಿಗಳನ್ನು ಭೂ ಸೇನಾ ಸಂಸ್ಥೆಗೆ ವಹಿಸಿಕೊಟ್ಟಿರುವುದು ನಿಜವೇ, ಹಾಗಿದ್ದಲ್ಲಿ ಆದೇಶವನ್ನು ಯಾವಾಗ ಕೊಟ್ಟಿದ್ದೀರಿ ಎಂದು ನಾನು ಕೇಳಿದ್ದೇನೆ. ಅದಕ್ಕೆ ನಿಜ ಎಂದು ಅಷ್ಟೇ ಉತ್ತರದಲ್ಲಿ ಕೊಟ್ಟಿದ್ದೀರಿ. ಯಾವಾಗ ಕೊಟ್ಟಿದ್ದೀರಿ ಎಂದು ತಿಳಿಸುತ್ತೀರಾ?

†ಶ್ರೀ ಎಚ್. ಎಂ. ಚನ್ನಬಸಪ.—6-1-1975ರಲ್ಲಿ ಕೊಟ್ಟಿದೆ.

ಶ್ರೀ ಜೆ. ಎಲ್. ಕಬಾಡೆ.—ಪ್ರತಿಯೊಂದು ಕಾಮಗಾರಿಗೆ 25 ಲಕ್ಷ ರೂಪಾಯಿಗಳಿಗಿಂತ ಜಾಸ್ತಿಯಾದರೆ ಅದನ್ನು ಭಾರಿ ನೀರಾವರಿ ಯೋಜನೆ ಮಟ್ಟಕ್ಕೆ ಆ ಕೆಲಸವನ್ನು ಕೈಗೊಳ್ಳಬೇಕು ಎಂದು ಹೇಳಿದೆ. ಅದರ ಪ್ರಕಾರ ಈ ಕೆಲಸವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲು 25 ಲಕ್ಷ ರೂಪಾಯಿಗಳಿಗಿಂತ ಕಡಿಮೆ ವೆಚ್ಚವಾಗತಕ್ಕ ಕಾಮಗಾರಿಯನ್ನು ಮೈನರ್ ಇರಿಗೇಷನ್ ಎಂದು ಪರಿಗಣಿಸುತ್ತಾ ಇದ್ದರು. ಇತ್ತೀಚೆಗೆ ಗವರ್ನಮೆಂಟ್ ಆಫ್ ಇಂಡಿಯಾದವರು 25 ಲಕ್ಷ ರೂಪಾಯಿಗೆ ಮೇಲ್ಪಟ್ಟಿರುವುದನ್ನು ಸಿ.ಡಬ್ಲ್ಯೂ.ಪಿ.ಸಿ ಗೆ ಕಳುಹಿಸಿ ವಿಚಾರಮಾಡಬೇಕು ಎಂದು ಮಾಡಿದೆ. ಆ ಪ್ರಕಾರ ಅದನ್ನು ಮಾಡಿದ ಮೇಲೆ ಇದನ್ನು ಬದಲಾವಣೆ ಮಾಡಿದೆ.

ಶ್ರೀ ಜೆ. ಎಲ್. ಕಬಾಡೆ—ಲ್ಯಾಂಡ್ ಆರ್ಮಿ ಕಾರ್ಪೊರೇಷನ್ನಿನಲ್ಲಿ ಟೆಕ್ನಿಷಿಯನ್ಸ್ ಇಲ್ಲದೇ ಇರುವುದರಿಂದ ಈ ಕೆರೆಯ ಕೆಲಸ ಯಶಸ್ವಿ ರೀತಿಯಾಗಿ ನಡೆಯದೆ ತೃಪ್ತಿಕರವಾಗಿಲ್ಲವೆನ್ನುವ ಬಗ್ಗೆ ಒಂದು ವರದಿಯನ್ನು ಮಾಡಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಟೆಕ್ನಿಕಲ್ ಪೀಪಲ್ ಅದರಲ್ಲಿಲ್ಲವೆಂದು ಯಾರು ಹೇಳಿದರು.

ಶ್ರೀ ಜೆ. ಎಲ್. ಕಬಾಡೆ.—ನಮಗೆ ಗೊತ್ತಿರುವ ಹಾಗೆ ಹೇಳಿದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ—ಅಲ್ಲಿ ಅಸಿಸ್ಟೆಂಟ್ ಇಂಜನಿಯರ್ ಒಬ್ಬರು, ಮತ್ತು ಸೂಪರಿಂಟೆಂಡಿಂಗ್ ಇಂಜನಿಯರ್ ಒಬ್ಬರು ಇದ್ದಾರೆ. ಅಲ್ಲಿ ಅಂತಹವರು ಯಾರು ಇಲ್ಲವೆಂದು ಯಾರು ಹೇಳಿದರು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು—(ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ವಿಶ್ವಬ್ಯಾಂಕ್ ಸಂಸ್ಥೆಯಿಂದ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ನಿಗೆ ಎಷ್ಟು ಹಣ ಬಂದಿದೆ ? ಎಷ್ಟು ಕೆಲಸ ಕಾರ್ಯಗಳನ್ನು ಅವರು ತೆಗೆದುಕೊಂಡು ಕ್ಲಿಪ್ತಕಾಲದಲ್ಲಿ ಮುಗಿಸಿದ್ದಾರೆಂಬ ಬಗ್ಗೆ ಉತ್ತರ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ—೯ ಕಾರ್ಯಕ್ರಮಗಳು ಮಂಜೂರಾಗಿವೆ. ೧೩೯ ಲಕ್ಷ ರೂಪಾಯಿಗಳ ಕಾರ್ಯಕ್ರಮ ಅವರಲ್ಲಿದೆ.

ಶ್ರೀ ಕೆ. ಆರ್ ಶ್ರೀನಿವಾಸುಲು ನಾಯಡ್ಡಿ—ಎಷ್ಟು ಕಾಮಗಾರಿಗಳನ್ನು ಅವರ ಒಂದು ನೆರವಿನಿಂದ ಕ್ಲಿಪ್ತಕಾಲದಲ್ಲಿ ಮುಗಿಸಿದ್ದಾರೆಂಬ ಬಗ್ಗೆ ವಿವರ ಕೊಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ—ಕ್ಲಿಪ್ತ ಕಾಲದಲ್ಲಿ ಒಂದು ಜಲಾಶಯದ ಕೆಲಸ ಕಟ್ಟುವುದು ಪೂರ್ತಿಯಾಗಿದೆ. ಇತರ ಎಲ್ಲಾ ಕಾಮಗಾರಿಗಳು ಬೇರೆಬೇರೆ ಹಂತಗಳಲ್ಲಿವೆ

ಶ್ರೀ ಎಂ. ಎಸ್.—ಕೃಷ್ಣನ್ ಜಲಾಶಯಗಳನ್ನು ಮತ್ತು ನೀರಾವರಿ ಯೋಜನೆಗಳನ್ನು ಕಟ್ಟಿ ಖರ್ಚುಮಾಡುವುದಕ್ಕೆ ಈಗಾಗಲೇ ಒಂದು ಪಿ.ಡಬ್ಲ್ಯೂ.ಡಿ ಇರಬೇಕಾದರೆ, ಈ ಒಂದು ಕೆಲಸವನ್ನು ಭೂ ಸೇನಾ ಸಂಸ್ಥೆಗೆ ಕೊಡುವ ಅವಶ್ಯಕತೆ ಏನಿತ್ತು ? ಅದರ ಗೊತ್ತು ಗುರಿಗಳು ಮತ್ತು ಧ್ಯೇಯೋದ್ದೇಶಗಳು ನಿಮ್ಮ ರೀತಿ ನೀತಿಗಳಿಗನುಗುಣವಾಗಿದೆಯೇ ?

ಶ್ರೀ ಹೆಚ್. ಎಂ ಚನಬಸಪ್ಪ—ಪ್ರಯೋಗಾರ್ಥವಾಗಿ ಇದನ್ನು ಪಿ.ಡಬ್ಲ್ಯೂ.ಡಿ ಯವರು ಮಾಡತಕ್ಕದೆಂದಿದೆ. ಮತ್ತೆ ಈ ಕಾಮಗಾರಿಯನ್ನು ಮೊದಲೇ ಲ್ಯಾಂಡ್ ಆರ್ಮಿ ಕಾರ್ಪೊರೇಷನವರಿಗೇ ಕೊಟ್ಟಿತ್ತು. ಅಲ್ಲಿ ಹೆಚ್ಚಿನ ಅನುಕೂಲವಾದರೆ ಅವರೇ ಅವನ್ನು ಏಕೆ ಮಾಡಬಾರದೆಂದು ಪ್ರಯೋಗಾರ್ಥವಾಗಿ ವ್ಯವಸ್ಥೆಮಾಡಿಯಾಯ್ತೆ.

ಶ್ರೀ ಜೆ. ಎಲ್. ಕಬಾಡೆ.—ಲ್ಯಾಂಡ್ ಆರ್ಮಿಯಲ್ಲಿ ಟೆಕ್ನಿಕಲ್ ಸ್ಟಾಫ್ ಇದೆಯೆಂದು ಹೇಳಿದಿರಿ. ಅಲ್ಲೆರತಕ್ಕ ಸೂಪರಿಟೆಂಡಿಂಗ್ ಇಂಜನಿಯರ್ಸ್ ಎಷ್ಟು ? ಎಗ್ಸಿಕ್ಯುಟಿವ್ ಇಂಜನಿಯರ್ಸ್ ಎಷ್ಟು ಜ್ಯೂನಿಯರ್ ಇಂಜನಿಯರ್ಸ್ ಎಷ್ಟು, ಚೀಫ್ ಇಂಜನಿಯರ್ಸ್ ಎಷ್ಟು ?

ಶ್ರೀ ಹೆಚ್. ಎಂ. ಚನ್ನಬಸಪ್ಪ—ಬಿಜಾಪುರದಲ್ಲಿ ಒಬ್ಬ ಎಗ್ಸಿಕ್ಯುಟಿವ್ ಇಂಜಿನಿಯರ್ ಮೂರು ಜನ ಅಸಿಸ್ಟೆಂಟ್ ಇಂಜನಿಯರ್ಸ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಒಬ್ಬ ಸೂಪರಿಂಟೆಂಡಿಂಗ್ ಇಂಜನಿಯರ್, ಒಬ್ಬ ಎಗ್ಸಿಕ್ಯುಟಿವ್ ಇಂಜನಿಯರ್ ಇದ್ದಾರೆ.